# **ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ**

ಸಿ ಸಿ ನಂಬರ 72/2026

| | | | |
|---|---|---|---|
| ಸಿಡಬ್ಲ್ಯೂ | 10 | ಪಿಡಬ್ಲ್ಯೂ | 5 |

ಸಾಕ್ಷಿದಾರರ ಹೆಸರು : ಮಾಲೀಕ್ ಸಾಬ್ ಕಲಾರಿ

ತಂದೆಯ ಹೆಸರು : ಜಂಗ್ಲಿ ಸಾಬ್ ಕಲಾರಿ

ವಯಸ್ಸು : 63 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 18.06.2025

ಉದ್ಯೋಗ : ನಿವೃತ್ತ ಪಿ.ಎಸ್.ಐ.

ವಾಸ ಸ್ಥಳ : ಶೃಂಗಾರತೋಟ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ದಿನಾಂಕ 21.06.2014 ರಂದು ನಾನು ಮುಖ್ಯ ಪೇದೆ ಆಗಿದ್ದಾಗ ಠಾಣಾ ಕರ್ತವ್ಯದಲ್ಲಿ ಇದ್ದು ಸಂಜೆ 8 ಗಂಟೆ ಚಾ ಸಾ 1 ರವರು ನೀಡಿದ ಗಣಕೀಕೃತ ದೂರನ್ನು ಸ್ವೀಕರಿಸಿಕೊಂಡು ಠಾಣಾ ಗುನ್ನೆ ನಂಬರ 153/2014 ರಂತೆ ಪ್ರಕರಣವನ್ನು ದಾಖಲಿಸಿಕೊಂಡಿರುತ್ತೇನೆ. ಅದೇ ದಿನ ಪ್ರಥಮ ವರ್ತಮಾನ ವರದಿ ಯನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ದೂರನ್ನು ನಿ ಪಿ 2 ಎಂದು , ಸಾಕ್ಷಿ ಸಹಿಯನ್ನು ನಿ ಪಿ 2(ಎ) ಎಂದು ಗುರುತಿಸಲಾಯಿತು. ಸದರಿ ಪ್ರಥಮ ವರ್ತಮಾನ ವರದಿಯನ್ನು ನಿ ಪಿ 3 ಎಂದು ಗುರುತಿಸಲಾಯಿತು. ಸಾಕ್ಷಿ ಸಹಿಯನ್ನು ನಿ ಪಿ 3(ಎ) ಎಂದು ಗುರುತಿಸಲಾಯಿತು. 22.06.2014 ರಂದು ಸಾಕ್ಷಿದಾರರಾದ ಚಾ ಸಾ 4 ರವರ ಸಮಕ್ಷಮ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಚಾ ಸಾ 2 ಮತ್ತು 3 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.30 ಗಂಟೆಯವರೆಗೆ ಕೃತ್ಯ ಸ್ಥಳದ ಪಂಚನಾಮೆ ಮಾಡಿರುತ್ತೇನೆ. ಪಿರ್ಯಾದುದಾರರ ಮರು ಹೇಳಿಕೆ ಪಡೆದುಕೊಂಡಿರುತ್ತೇನೆ. ಚಾ. ಸಾ. 4 ಮತ್ತು ಚಾ. ಸಾ. 5 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. 24.06.2014 ರಂದು ಆರೋಪಿತರನ್ನು ದಸ್ತಗಿರಿ ಮಾಡಿ ಜಾಮೀನಿನ ಮೇಲೆ ಬಿಡುಗಡೆ ಮಾಡಿರುತ್ತೇನೆ. ಕೃತ್ಯ ಸ್ಥಳ ಪಂಚನಾಮೆ ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದೆ. ಸಾಕ್ಷಿ ಸಹಿಯನ್ನು ನಿ ಪಿ 1(ಸಿ) ಎಂದು ಗುರುತಿಸಲಾಯಿತು. ಚಾ ಸಾ 4 ರಿಂದ ಚಾ ಸಾ 6 ರವರ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಕಡತವನ್ನು ಚಾ ಸಾ 11 ರವರಿಗೆ ಹಸ್ತಾಂತರಿಸಿರುತ್ತೇನೆ.

**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಪಿ ವಕೀಲರಿಂದಃ-**

ದೂರುದಾರರು ಸ್ವ ಇಚ್ಛೆಯಿಂದ ದೂರು ದಾಖಲಿಸಿಲ್ಲಾ ಎಂದರೆ ಸರಿಯಲ್ಲ. ನಾನೇ ಸ್ವ ಇಚ್ಛೆಯಿಂದ ದೂರು ಬರೆದುಎಕೊಂಡು ಪ್ರಥಮ ವರ್ತಮಾನ ವರದಿ ಸಲ್ಲಿಸಿರುತ್ತೇನೆ ಎಂದರೆ

ಸರಿಯಲ್ಲ. ಆರೋಪಿತರು ಪಿರ್ಯಾದುದಾರರ ಮೇಲೆ ದೂರು ಕೊಟ್ಟಿರುವ ಕಾರಣ ಅವರ ಒತ್ತಡದ ಮೇಲೆ ಸುಳ್ಳು ದೂರು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಪೋಲೀಸ ಠಾಣೆ ಪಂಚನಾಮೆ ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ಚಾ ಸಾ 2 ರಿಂದ ಚಾ ಸಾ 4 ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಪೋಲೀಸ ಠಾಣೆ ಯಲ್ಲಿ ಸಹಿ ಪಡೆದಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿದಾರರ ಹೇಳಿಕೆ ಕೂಡ ಪಡೆದುಕೊಂಡಿರುವುದಿಲ್ಲಾ ಎಂದರೆ ಸರಿಯಲ್ಲ. ಪ್ರಕರಣಕ್ಕೆ ಅನುಕೂಲವಾಗುವಂತೆ ನಾನು ದಾಖಲೆಯನ್ನು ಬರೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ತನಿಖೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾ:-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

<u>**ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ**</u>

ಸಿ ಸಿ ನಂಬರ 72/2026

| | | | |
|---|---|---|---|
| ಸಿಡಬ್ಲ್ಯೂ | 11 | ಪಿಡಬ್ಲ್ಯೂ | 6 |

ಸಾಕ್ಷಿದಾರರ ಹೆಸರು : ವಂಸತ ವಿಠಲ್ ಅಸೋಡೆ

ತಂದೆಯ ಹೆಸರು : ವಿಠಲ ಅಸೋಡೆ

ವಯಸ್ಸು : 47 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 18.06.2026

ಉದ್ಯೋಗ : ಪಿ ಎಸ್ ಐ

ವಾಸ ಸ್ಥಳ : ಚಿತ್ರದುರ್ಗ

<u>**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**</u>

22.06.2014 ರಂದು ಚಾ ಸಾ 10 ರವರಿಂದ ಕಡತ ಪಡೆದು ತನಿಖೆ ಮುಂದುವರೆಸಿ 27.06.2014 ರಂದು ಚಾ. ಸಾ. 2 ಮತ್ತು 6 7 ಮತ್ತು 8 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕ 15.08.2014 ರಂದು ಚಾ. ಸಾ. 5 ರವರ ಗಾಯದ ಪ್ರಮಾಣ ಪತ್ರವನ್ನು ಚಾ. ಸಾ. 9 ರವರಿಂದ ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಗಾಯದ ಪ್ರಮಾಣ ಪತ್ರ ನಿ ಪಿ 4 ಎಂದು, ಸಾಕ್ಷಿ ಸಹಿಯನ್ನು ನಿ ಪಿ 4(ಎ) ಎಂದು ಗುರುತಿಸಲಾಯಿತು.

ತನಿಖೆ ಪೂರ್ಣಗೊಳಿಸಿ ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

<u>**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಪಿ ವಕೀಲರಿಂದಃ-**</u>

ಚಾ. ಸಾ. 2 ಮತ್ತು 6 7 ಮತ್ತು 8 ರವರು ಹೇಳಿಕೆಯನ್ನು ಕೊಟ್ಟಿರುವುದಿಲ್ಲಾ ಎಂದರೆ ಸರಿಯಲ್ಲ. ದಿನಾಂಕ 15.08.2014 ರಂದು ಚಾ. ಸಾ. 5 ರವರ ಗಾಯದ ಪ್ರಮಾಣ ಪತ್ರವನ್ನು ಚಾ. ಸಾ. 9 ರವರಿಂದ ಪಡೆದಿರುವುದಿಲ್ಲಾ ಎಂದರೆ ಸರಿಯಲ್ಲ. ಸುಳ್ಳು ತನಿಖೆಯನ್ನು ಮಾಡಿ ಆರೋಪ ಕಂಡುಬಾರದಿದ್ದರೂ ಸಹ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ರಾಜಕೀಯ ಒತ್ತಡದ ಮೇರೆಗೆ ಸುಳ್ಳು ದೋಷಾರೋಪಣ ಪಟ್ಟಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.

ಸಿ ಸಿ ನಂಬರ 72/2026

| | | | |
|---|---|---|---|
| ಸಿಡಬ್ಲ್ಯೂ | 4 | ಪಿಡಬ್ಲ್ಯೂ | 4 |

**ದಿನಾಂಕ 18.06.2026 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲು ಆರೋಪಿ ಪರ ಶ್ರೀ ಕೆ ಪಿ ವಕೀಲರಿಂದಃ-**

ದೂರನ್ನು ನಾನೇ ಕೊಟ್ಟಿರುತ್ತೇನೆ. ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಲಕ್ಷ್ಮವ್ವ ನನ್ನ ತಾಯಿ ಎಂದರೆ ಸರಿ. ಯಾವುದೇ ಘಟನೆ ಆಗದೇ ಇದ್ದರೂ ಸಹ ಸುಳ್ಳು ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಮಗೂ ಆರೋಪಿತರಿಗೂ ಬಹಳಷ್ಟು ಸಿವಿಲ್ ವ್ಯಾಜ್ಯ ಇದೆ ಎಂದರೆ ಸರಿ. ಹೆದರಿಸಿ ಭೂಮಿ ದಕ್ಕಹಾಕಿಕೊಳ್ಳಬೇಕೆಂದು ಸುಳ್ಳು ಕೇಸನ್ನು ಹಾಕಿರುತ್ತೇನೆ ಎಂದರೆ ಸರಿಯಲ್ಲ. ಯವುದೇ ಘಟನೆ ಆಗದಿದ್ದರೂ ಸಹ ಆರೋಪಿತರು ದೂರು ಸಲ್ಲಿಸಿರುವ ಕಾರಣ ನಾನು ಸಹ ದೂರು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಯಾವುದೇ ಘಟನೆ ನಡೆಯದಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

# **ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹರಪನಹಳ್ಳಿ**

ಸಿ ಸಿ ನಂಬರ 72/2026

| | | | |
|---|---|---|---|
| ಸಿಡಬ್ಲ್ಯೂ | 9 | ಪಿಡಬ್ಲ್ಯೂ | 7 |

ಸಾಕ್ಷಿದಾರರ ಹೆಸರು : ಡಾಃ ವೇಣುಗೋಪಾಲ್

ತಂದೆಯ ಹೆಸರು : ಹನುಮಂತರಾವ್ ದೇಶ್ ಪಾಂಡೆ

ವಯಸ್ಸು : 48 ವರ್ಷ ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು 18.06.2026

ಉದ್ಯೋಗ : ವೈದ್ಯಾಧಿಕಾರಿ

ವಾಸ ಸ್ಥಳ : ಅಬ್ಬಲ್ ಪುರ

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದ:-**

ದಿನಾಂಕ 21.06.2014 ರಂದು ಕೃಷ್ಣಪ್ಪ ತಂದೆ ದುರ್ಗಪ್ಪ ಎನ್ನುವವರು ಹಲ್ಲೆಯ ಹಿನ್ನೆಲೆಯಲ್ಲಿ ನಮ್ಮ ಆಸ್ಪತ್ರೆಗೆ ಬಂದಿದ್ದರು ಅವರನ್ನು ಪರೀಕ್ಷಿಸಿದಾಗ ಈ ಕೆಳಕಂಡ ಗಾಯಗಳು ಕಂಡು ಬಂದಿರುತ್ತದೆ. ಬಲ ಮಂಡಿ ಮತ್ತು ಬಲ ಎದೆಯ ಭಾಗದಲ್ಲಿ ನೋವು ಇತ್ತು. ಸದರಿಯವರಿಗೆ ಆದ ಗಾಯಗಳು ಸಾಮಾನ್ಯ ಸ್ವರೂಪದ್ದು ಆಗಿತ್ತು. ಹಲ್ಲೆ ಮಾಡಿದರೆ ಈ ರೀತಿ ಗಾಯಗಳು ಆಗುವ ಸಾಧ್ಯತೆ ಇರುತ್ತದೆ. ಸದರಿ ಗಾಯದ ಪ್ರಮಾಣ ಪತ್ರವನ್ನು ನಿ ಪಿ 4 ಎಂದು ಗುರುತಿಸಲಾಗಿದೆ ಸಾಕ್ಷಿ ಸಹಿಯನ್ನು ನಿ ಪಿ 4(ಬಿ) ಎಂದು ಗುರುತಿಸಲಾಯಿತು.

**ಪಾಟೀ ಸವಾಲು ಆರೋಪಿ ಪರ ಶ್ರೀ K.P. ವಕೀಲರಿಂದಃ-**

ಕೃಷ್ಣಪ್ಪ ತಂದೆ ದುರ್ಗಪ್ಪ ಸ್ವಂತ ಬಂದಿದ್ದರು. ನಿ ಪಿ 4 ರಲ್ಲಿ ನಾನು ಸಮಯ ಕೂಡ ತೋರಿಸಿರುತ್ತೇನೆ. ಕೃಷ್ಣಪ್ಪ ತಂದೆ ದುರ್ಗಪ್ಪ ನಮ್ಮಲ್ಲಿ ಚಿಕಿತ್ಸೆ ಪಡೆದಿರುವುದಿಲ್ಲಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರ ಕೋರಿಕೆಯ ಮೇರೆಗೆ ಸುಳ್ಳು ಗಾಯದ ಪ್ರಮಾಣ ಪತ್ರವನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಒಬ್ಬ ವ್ಯಕ್ತಿ ಮಂಡಿ ಊರಿ ಬಿದ್ದರು ಸಹ ಈಗ ಹೇಳಿದಂತೆ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ.

ಮರು ವಿಚಾರಣೆ ಇಲ್ಲಾಃ-

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.) ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.